ಒದ್ದಾಡುತ್ತ ಉರುಳಿನಲ್ಲಿ ಕತ್ತು ಸಿಕ್ಕಿಸಿಕೊಂಡು ಆ ದೇಹಗಳು ಪ್ರಾಣ ಬಿಡುವಂತೆ ಮಾಡಿದವನ ಮುಖ ಯಾವತ್ತಿಗೂ ಮರೆಯಲಾದೀತೇ? ಆ ಕೆಲಸ ನಿರ್ವಹಿಸಿದ ವ್ಯಕ್ತಿಯ ತಲೆ ಈಗ ನನ್ನ ಕೈಗೆ ಸಿಗುತ್ತಿದೆ... ನಿಜಕ್ಕೂ ಅದು ಆಕ್ರೋಶ ತರಿಸುವ ಮುಖ. ವಯಸ್ಸಿಗಿಂತಲೂ ತುಸು ಹೆಚ್ಚೇ ಎನಿಸುವಂತಿದ್ದ ಗಡ್ಡ, ಆತನ ಮುಖಕ್ಕೆ ಖಂಡಿತವಾಗಿಯೂ ಸರಿಹೊಂದುತ್ತಿರಲಿಲ್ಲ.

ಆತನ ಹೆಸರು ಟಾರೆಸ್. ಕ್ಯಾಪ್ಟನ್ ಟಾರೆಸ್. ಸೆರೆಹಿಡಿದ ಬಂಡುಕೋರರನ್ನು ಬೆತ್ತಲೆಯಾಗಿ ನೇಣು ಹಾಕಿ, ಆಮೇಲೆ ಆ ದೇಹದ ಭಾಗಗಳನ್ನು ಗುಂಡು ಹೊಡೆಯುವ ಅಭ್ಯಾಸಕ್ಕೆ ಗುರಿಯಾಗಿಸುವ ಕಲ್ಪನೆಯ ಮನುಷ್ಯ ಆತ.

ಅಷ್ಟೊತ್ತಿಗೆ ಸೋಪಿನ ನೊರೆ ಸಾಕಷ್ಟು ಬಂದಿತ್ತು. ಬಟ್ಟಲಿನಲ್ಲಿ ಬ್ರಶ್ ಅದ್ದಿ ತೆಗೆದು, ಮೊದಲ ಸುತ್ತು ನೊರೆಯನ್ನು ಕೆನ್ನೆಗೆ ಲೇಪಿಸಲು ಶುರು ಮಾಡಿದೆ. ಆ ತಣ್ಣನೆಯ ಸ್ಪರ್ಶ ಅನುಭವಿಸುತ್ತ 'ಈಗ ನೇರವಾಗಿ ಹಾಸಿಗೆಯಲ್ಲಿ ಮಲಗಿದರೆ ತಕ್ಷಣವೇ ನಿದ್ದೆ ಬರುತ್ತದೆ. ಆದರೆ, ಮಧ್ಯಾಹ್ನ ಸಾಕಷ್ಟು ಕೆಲಸ ಇವೆ' ಎಂದ.

ನಾಲ್ಕೈದು ಸಲ ಕೆನ್ನೆ ಮೇಲೆ ಓಡಾಡಿದ್ದ ಬ್ರಶ್ ಅಲ್ಲಿಗೇ ನಿಂತಿತು. ಹೆಚ್ಚೇನೂ ಕುತೂಹಲ ತೋರದಂತೆ ನಟಿಸುತ್ತ 'ಮತ್ತೊಂದು ಗುಂಡಿನ ದಾಳಿಯೇ' ಎಂದು ಪ್ರಶ್ನಿಸಿದೆ.

'ಒಂದು ಬಗೆಯಲ್ಲಿ ಹಾಗೆಯೇ. ಆದರೆ, ಅಷ್ಟೇನೂ ವಿಶೇಷವಲ್ಲ ಅಂದುಕೊಳ್ಳಬಹುದು' ಎಂದು ಕಣ್ಣು ಮುಚ್ಚಿಕೊಂಡೇ ಉತ್ತರಿಸಿದ.

ಈಗ ನಾನು ಆತನ ಕೆನ್ನೆಯಿಂದ ಕೆಳಭಾಗದ ಗಡ್ಡದತ್ತ ನೊರೆಯನ್ನು ಲೇಪಿಸುತ್ತ ಕೆಲಸ ಮುಂದುವರಿಸಿದೆ. ಅದನ್ನು ಮಾಡುವಾಗ ನನ್ನ ಕೈಗಳು ನಡುಗುತ್ತಿದ್ದವು. ಆದರೆ, ನನ್ನ ಅದೃಷ್ಟಕ್ಕೆ, ಆತನಿಗೆ ಅದು ಗೊತ್ತಾಯಿತೆಂದು ಅನಿಸಲಿಲ್ಲ. ಛೇ! ನನ್ನ ಅಂಗಡಿಗೆ ಆತ ಬರಬಾರದಿತ್ತು ಎಂದು ನನ್ನ ಮನಸ್ಸು ಹೇಳಿತು. ಹೀಗೆ ಒಳಗೆ ಬರುವುದನ್ನು ನನ್ನ ಒಡನಾಡಿಗಳು ನೋಡಿದರೆ ಹೇಗಿತ್ತೋ?

ಶತ್ರುವೊಬ್ಬ ಒಳಬಂದಾಗ ಕೆಲವೊಂದು ವಿಶಿಷ್ಟ ಪರಿಸ್ಥಿತಿ ಸೃಷ್ಟಿಯಾಗುತ್ತವೆ. ಇತರ ಗಿರಾಕಿಗಳಂತೆಯೇ ಈತನನ್ನೂ ಭಾವಿಸಿ, ಆತನಿಗೆ ಕ್ಷೌರ ಮಾಡಬೇಕು. ತಣ್ಣನೆಯ ನೊರೆಯನ್ನು ಕೆನ್ನೆ- ಗದ್ದಕ್ಕೆ ಮೆಲುವಾಗಿ ಲೇಪಿಸಿ, ಕತ್ತಿಯನ್ನು ಗಟ್ಟಿಯಾಗಿ ಹಿಡಿದು ಅತ್ಯಂತ ಜಾಗರೂಕತೆಯಿಂದ ಕ್ಷೌರ ಮಾಡಬೇಕು. ಯಾವುದೇ ಕಾರಣಕ್ಕೂ ಒಂದು ಹನಿ ರಕ್ತ ಸೂಸುವಂತೆ ಚಿಕ್ಕ ಗಾಯ ಆಗಲೇಬಾರದು. ನನ್ನ ಚೂಪಾದ ಕತ್ತಿಗೆ ಸಿಲುಕಿಯೂ ಗಡ್ಡದ ಒಂದೇ ಒಂದು ಕೂದಲು ಸಹ ಉಳಿಯಬಾರದು. ಅದು ನನ್ನ ಹೆಮ್ಮೆ ಹಾಗೂ ಘನತೆಯುಳ್ಳ ವೃತ್ತಿಗೆ ಸಲ್ಲುವ ಗೌರವ.

ನೊರೆ ಹಚ್ಚುವುದನ್ನು ನಿಲ್ಲಿಸಿದೆ. ಕೆನ್ನೆ ಮೇಲೆ ನುಣುಪಾದ ಬಿಳಿ ನೊರೆ ಕೂತಿತ್ತು. ಹಿಂದಿನಿಂದ ಬಂದು ಆತನ ಎರಡೂ ಕೆನ್ನೆಗಳನ್ನು ನನ್ನೆರಡೂ ಕೈ ಆವರಿಸಿ ಮೆದುವಾಗಿ ಸ್ಪರ್ಶಿಸಿದೆ. ನೊರೆಯ ಹೊರತಾಗಿ ಒಂದು ಕೂದಲು ಸಹ ಕೈಗೆ ಮುಟ್ಟಲಿಲ್ಲ. ಹೌದು! ನಾನು ಬಂಡುಕೋರ. ರಹಸ್ಯವಾಗಿ ಕಾರ್ಯಾಚರಣೆ ಮಾಡುತ್ತಿದ್ದ ಬಂಡುಕೋರ! ಆದರೆ ಅದೇ ಸಮಯದಲ್ಲಿ ನನ್ನ ವೃತ್ತಿಯ ಬಗ್ಗೆ ಅಪಾರ ಹೆಮ್ಮೆಯಿದ್ದ ಕ್ಷೌರಿಕ ಕೂಡ. ನಾಲ್ಕು ದಿನಗಳ ಅವಧಿಯಲ್ಲಿ ಹಸನಾಗಿ ಬೆಳೆದ ಈ ಗಡ್ಡವು ನನ್ನನ್ನು ಸವಾಲಿನಂತೆ ಕೆಣಕುತ್ತಿತ್ತು.

ಕ್ಷೌರದ ಕತ್ತಿಯನ್ನು ಬಲಗೈಯಲ್ಲಿ ಹಿಡಿದುಕೊಂಡು, ಅದರ ಎರಡೂ ಕಿರುಬಾಹುಗಳನ್ನು ತೆರೆದೆ. ಕತ್ತಿ ಹರಿತವಾಗಿದೆ ಎಂಬುದನ್ನು ಖಚಿತಪಡಿಸಿಕೊಂಡು, ಮೊದಲಿಗೆ ಕೆನ್ನೆಯ ಮೇಲೆ ನಿಧಾನವಾಗಿ ಓಡಿಸಿದೆ. ಅತ್ಯಂತ ಸರಾಗವಾಗಿ ಕತ್ತಿಯು ತನ್ನ ಕೆಲಸ ಶುರು ಮಾಡಿತು. ಕೆನ್ನೆ ಮೇಲಿದ್ದ ಕೂದಲುಗಳು ಕತ್ತಿಯ ಓಟಕ್ಕೆ ಸುಲಭವಾಗಿ ಹೊರಬಂದರೆ, ಗದ್ದದ ಮೇಲೆ ತುಸು ಕಠಿಣವಾಗಿ ವರ್ತಿಸಬೇಕಾಯಿತು. ರಾಶಿ ರಾಶಿ ನೊರೆಯಿಂದಾಗಿ, ಕತ್ತಿಯು ಸದ್ದು ಮಾಡದೇ ತನ್ನ ಕೆಲಸವನ್ನು ಸುಗಮವಾಗಿ ನಿರ್ವಹಿಸಿತು.

ಕತ್ತಿಯನ್ನು ಸ್ವಚ್ಛ ಮಾಡಲು ತೆಗೆದುಕೊಂಡೆ. ಪಕ್ಕದಲ್ಲೇ ಇಟ್ಟಿದ್ದ ಮಸೆಗಲ್ಲನ್ನು ಎಡಗೈಯಲ್ಲಿ ಹಿಡಿದು, ಕತ್ತಿಯನ್ನು ತಿಕ್ಕುತ್ತ ಮತ್ತೆ ಹರಿತ ಮಾಡಿದೆ. ಅದನ್ನು ನಾನು ಮಾಡಲೇಬೇಕಿತ್ತು; ಯಾಕೆಂದರೆ ನಾನೊಬ್ಬ ಕ್ಷೌರಿಕ. ಆ ಎಲ್ಲ ಕೆಲಸವನ್ನೂ ಚಾಚೂ ತಪ್ಪದೇ ನಿರ್ವಹಿಸಲೇಬೇಕಲ್ಲ? ಕಣ್ಣುಮುಚ್ಚಿಕೊಂಡು ಇಲ್ಲಿಯವರೆಗೆ ಕುರ್ಚಿಯಲ್ಲಿ ಆತ, ಈಗ ಕಣ್ಣು ತೆರೆದು ಬಟ್ಟೆಯೊಳಗಿನಿಂದ ಕೈಗಳನ್ನು ಹೊರಕ್ಕೆ ತೆಗೆದು ಕ್ಷೌರ ಮಾಡಿದ ಕೆನ್ನೆಯನ್ನು ನೇವರಿಸಿಕೊಂಡ. ಎರಡು